ಆ) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಭಾರತ ಸರ್ಕಾರದಿಂದ ಅನುಮೋದಿಸಲಾದ ಕಾರ್ಯ ಯೋಜನೆಯ ಅನುಸಾರ ಅರಣ್ಯದಲಿ ಬಿದ್ದ ಮರಗಳನ್ನು ತೆಗೆಯಬಹುದಾಗಿದೆ.

ಮರಮಟ್ಟುಗಳನ್ನು ಸರ್ಕಾರಿ ನಾಟಾ ಡಿಪೋವಿಗೆ ಸಾಗಿಸಿ ಬಹಿರಂಗ ಹರಾಜಿನಲ್ಲಿ ವಿಲೇ ಮಾಡಲಾಗುತ್ತದೆ.

ಅದಲ್ಲದೆ ಮರಗಳನ್ನು ಸರ್ಕಾರವು ನಿಗದಿಪಡಿಸಿರುವ ದರಗಳಲ್ಲಿ ಜನರಿಗೆ ಸ್ವಂತ ಬಳಕೆಗೆ ಮಂಜೂರು ಮಾಡಲು ಅವಕಾಶವಿರುತ್ತದೆ.

ಈ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

736(980) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ(ಕುಂಭಾಪುರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಕ್ರಮ-ಸಕ್ರಮ ಜಮೀನುಗಳಿಗೆ ಸಂಬಂಧಿಸಿದಂತೆ, ಅಕ್ರಮ ಜಮೀನು ಸಕ್ರಮೀಕರಣಗೊಳಿಸಲು ಕಂದಾಯ ಇಲಾಖೆಯವರು ಅರಣ್ಯ ಇಲಾಖೆಯ ಅಭಿಪ್ರಾಯ ಕೇಳಿದ ಕಡತಗಳಿಗೆ ಅಭಿಪ್ರಾಯ ನೀಡುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಅಕ್ರಮ-ಜಮೀನು ಸಕ್ರಮೀಕರಣಕ್ಕೆ ಸಂಬಂಧಪಟ್ಟಂತೆ ಎಷ್ಟು ಕಡತಗಳು ಅರಣ್ಯ ಇಲಾಖೆಗೆ ಬಂದಿರುತ್ತವೆ.

ಇ) ಸದರಿ ಕಡತಗಳಲ್ಲಿ ಇರುವ ಫಲಾನುಭವಿಗಳ ಸಂಖ್ಯೆ ಎಷ್ಟು;

ಈ) ಅಭಿಪ್ರಾಯ ನೀಡುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದರಿಂದ ಅರ್ಜಿದಾರರಿಗೆ ತೊಂದರೆಯಾಗುತ್ತಿದ್ದು ಈ ಬಗ್ಗೆ ಅಭಿಪ್ರಾಯ ನೀಡಲು ಕಾಲಮಿತಿ ನಿಗಧಿಗೊಳಿಸಿ ನಿರ್ದೇಶನ ನೀಡುವುದೇ?

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ(ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಅರಣ್ಯ ಇಲಾಖೆಯಿಂದ ವಿಳಂಬ ಧೋರಣೆ ಆಗಿರುವುದಿಲ್ಲ.

ಆ) ಅಕ್ರಮ ಜಮೀನು ಸಕ್ರಮೀಕರಣಕ್ಕೆ ಒಟ್ಟು 652 ಕಡತಗಳು ಇಲಾಖೆಗೆ ಬಂದಿರುತ್ತವೆ.

ಇ) ಒಟ್ಟು 1241 ಫಲಾನುಭವಿಗಳು ಇರುತ್ತಾರೆ.

ಈ) ಅಭಿಪ್ರಾಯ ನೀಡುವಲ್ಲಿ ಯಾವುದೇ ವಿಳಂಬ ಉಂಟಾಗಿರುವುದಿಲ್ಲ.

738(982) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ(ಕುಂದಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಕುಮ್ಕಿ ಹಕ್ಕು ಎಂದರೇನು ಹಾಗೂ ಹಕ್ಕು ಮಂಜೂರು ಮಾಡುವ ಮಾನದಂಡ ಯಾವುದು;

ಆ) ಕುಮ್ಕಿ ಹಕ್ಕಿನ ಪರಿಮಿತಿ ಎಷ್ಟು;

ಇ) 1964ನೇ ಇಸವಿಯವರೆಗೆ ಕುಮ್ಕಿ ಹಕ್ಕುಗಳನ್ನು ರೆಗ್ಯೂಲರೈಸ್ ಮಾಡಿದ್ದು, ಅನಂತರ ರೆಗ್ಯೂಲರೈಸ್ ಮಾಡದಿರಲು ಕಾರಣವೇನು;